## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 318 ಜಿಪಸ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:27-08-2019.

## ಸುತ್ತೋಲೆ

**ವಿಷಯ:** "ಸಬ್‌ಕೀ ಯೋಜನಾ ಸಬ್‌ಕಾ ವಿಕಾಸ್" (**"ಜನರ ಯೋಜನೆ ಜನರ ಅಭಿವೃದ್ಧಿ"**) ಹಾಗೂ 2020-21ರ "ನಮ್ಮ ಗ್ರಾಮ ನಮ್ಮ ಯೋಜನೆ"ಯನ್ನು ಸಿದ್ಧಪಡಿಸುವ ಬಗ್ಗೆ (02-10-2019 ರಿಂದ 31-12-2019ರ ವರೆಗೆ).

**ಉಲ್ಲೇಖ:**
1. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಅ.ಸ ಪತ್ರ ಸಂಖ್ಯೆ:M-11015/159/2019-CB, ದಿನಾಂಕ16-07-2019.
2. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಕಾರ್ಯದರ್ಶಿಯವರ ಡಿ.ಓ.ಸಂ.ಎಸ್‌ಇಸಿವೈ(ಆರ್‌ಡಿ)/ಎಂಐಎಸ್‌ಸಿ/2018 ದಿನಾಂಕ24-08-2018.
3. ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ ರವರ ಅ.ಸ ಪತ್ರ ಸಂಖ್ಯೆ:Q-16014/01/2019-A1 (RD) (e367904), ದಿನಾಂಕ:22-08-2019.
4. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 225 ಜಿಪಸ 2015, ದಿನಾಂಕ:25-07-2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಪತ್ರದಲ್ಲಿ ತಿಳಿಸಿರುವಂತೆ 2020-21 ನೇ ಸಾಲಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವ ಸಲುವಾಗಿ **"ಸಬ್‌ಕೀ ಯೋಜನಾ ಸಬ್‌ಕಾ ವಿಕಾಸ್"** ಅಡಿಯಲ್ಲಿ ಅಭಿಯಾನ ರೂಪದಲ್ಲಿ ಹಮ್ಮಿಕೊಳ್ಳಲು ನಿರ್ದೇಶಿಸಲಾಗಿರುತ್ತದೆ. ಈ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು ಅಭಿಯಾನವನ್ನು ಕೈಗೊಳ್ಳಬೇಕಿದೆ. ಈ ಅಭಿಯಾನವನ್ನು ಕೈಗೊಳ್ಳಲು ವಿವರವಾದ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ ವಿವರಗಳನ್ನು www.gpdp.nic.in ನೋಡಬಹುದಾಗಿದೆ.

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಉಲ್ಲೇಖಿತ ಪತ್ರ (3) ರನ್ವಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮಿಷನ್ ಅಂತ್ಯೋದಯ ಸಮೀಕ್ಷೆ ಆಯೋಜಿಸಬೇಕಾಗಿರುತ್ತದೆ. ಇದರಲ್ಲಿ ಗ್ರಾಮ ಪಂಚಾಯಿತಿ ಹಂತದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಕೊರತೆಗಳನ್ನು ನೀಗಿಸಲು ಹಾಗೂ ಅಭಿವೃದ್ಧಿಯಲ್ಲಿರುವ ಅಂತರವನ್ನು ಕಡಿಮೆ ಮಾಡಲು ಪ್ರಶ್ನಾವಳಿಯನ್ನು ಸಿದ್ಧಪಡಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮಂತ್ರಾಲಯವು ಪರಿಷ್ಕೃತ ಪ್ರಶ್ನಾವಳಿಯನ್ನು ಸಿದ್ಧಪಡಿಸಿದ್ದು, ಮಾಹಿತಿಗಳನ್ನು ಮೊಬೈಲ್ ತಂತ್ರಾಂಶದ ಮೂಲಕ ಸಂಗ್ರಹಣೆ ಮಾಡಿ ಅಪ್‌ಲೋಡ್ ಮಾಡಿ ಮಿಷನ್ ಅಂತ್ಯೋದಯ ತಂತ್ರಾಂಶದಲ್ಲಿ ಅಳವಡಿಸಬೇಕಾಗಿರುತ್ತದೆ.

### ಜನರ ಯೋಜನೆ ಜನರ ಅಭಿವೃದ್ಧಿಯ ಉದ್ದೇಶಗಳು:-

- ಸಮುದಾಯದ ಸಹಭಾಗಿತ್ವದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು.

- ಮಿಷನ್ ಅಂತ್ಯೋದಯ ಅಡಿಯಲ್ಲಿ ಸಿದ್ಧಪಡಿಸಿರುವ ಪರಿಷ್ಕೃತ ನಮೂನೆಗಳಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಂದ ಗ್ರಾಮವಾರು ಮಾಹಿತಿ ಸಂಗ್ರಹಣೆ ಮಾಡಿ ತಂತ್ರಾಂಶದಲ್ಲಿ ಅಳವಡಿಸುವುದು.
- ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲಾ ಭಾಗೀದಾರರುಗಳಿಗೆ (ಚುನಾಯಿತ ಜನಪ್ರತಿನಿಧಿಗಳು, ಅಧಿಕಾರಿ / ಸಿಬ್ಬಂದಿಗಳು, ಸ್ವ ಸಹಾಯ ಸಂಘದ ಸದಸ್ಯರುಗಳು, ಸಮುದಾಯಾಧಾರಿತ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಮುದಾಯದ ಪ್ರತಿನಿಧಿಗಳು) ಸಾಮರ್ಥ್ಯಾಭಿವೃದ್ಧಿಗೆ ಕ್ರಮವಹಿಸುವುದು.
- ಪಂಚಾಯತ್ ರಾಜ್ ಸಂಸ್ಥೆಗಳ ಅಡಿಯಲ್ಲಿರುವ 29 ವಿಷಯಗಳಿಗೆ ಸಂಬಂಧಿಸಿದಂತೆ ಪುರಾವೆ ಆಧಾರಿತ ಪ್ರಗತಿಯನ್ನು ವಿಶ್ಲೇಷಿಸುವುದು.
- ಸಾರ್ವಜನಿಕ ಮಾಹಿತಿ ಫಲಕಗಳನ್ನು ಗ್ರಾಮ ಪಂಚಾಯತಿಯಲ್ಲಿ ಅಳವಡಿಸಿ, ಸರ್ಕಾರದ ವಿವಿಧ ಯೋಜನೆಗಳು, ಹಣಕಾಸು ಮತ್ತು ಇತರೆ ವಿಷಯಗಳ ಮಾಹಿತಿಯನ್ನು ಸಮುದಾಯಕ್ಕೆ ತಲುಪಿಸುವುದು.
- ಗ್ರಾಮ ಪಂಚಾಯತಿ ಹಂತದ ಇತರೆ ಎಲ್ಲಾ ಪ್ರಮುಖ ಇಲಾಖೆಗಳ ಅಧಿಕಾರಿಗಳು ಗ್ರಾಮಸಭೆಯಲ್ಲಿ ಭಾಗವಹಿಸಲು ಕ್ರಮವಹಿಸುವುದು.
- 2020–21ನೇ ಸಾಲಿನ ಗ್ರಾಮ ಪಂಚಾಯತಿ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಅಂತಿಮಗೊಳಿಸಿ, ಪ್ಲಾನ್‌ಪ್ಲಸ್ ತಂತ್ರಾಂಶದಲ್ಲಿ ಅಳವಡಿಸುವುದು.

ರಾಜ್ಯದಲ್ಲಿ ಈ ಅಭಿಯಾನವನ್ನು ಎಲ್ಲಾ ಜಿಲ್ಲೆಗಳ ಗ್ರಾಮ ಪಂಚಾಯತಿಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ನೋಡಲ್ ಅಧಿಕಾರಿ / ಮೇಲ್ವಿಚಾರಣೆ ಅಧಿಕಾರಿಗಳನ್ನು ನೇಮಿಸುವ ಮೂಲಕ ಅವರುಗಳು ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸಲಾಗಿದೆ.

| ಕ್ರಮ ಸಂಖ್ಯೆ | ವಿಷಯ / ಚಟುವಟಿಕೆ | ಕಾಲಮಿತಿ | ಹೊಣೆಗಾರಿಕೆ |
|---|---|---|---|
| 1. | "ಜನರ ಯೋಜನೆ ಜನರ ಅಭಿವೃದ್ಧಿ" ರಾಜ್ಯ ಮಟ್ಟದ ನೋಡಲ್ ಅಧಿಕಾರಿ | – | ನಿರ್ದೇಶಕರು (ಪಂ.ರಾಜ್–1) |
| 2. | "ಜನರ ಯೋಜನೆ ಜನರ ಅಭಿವೃದ್ಧಿ" ಅಂಗವಾಗಿ ಆಯೋಜಿಸುವ ತರಬೇತಿ ಕಾರ್ಯಕ್ರಮಗಳು ಹಾಗೂ ಮಿಷನ್ ಅಂತ್ಯೋದಯ ನಮೂನೆಗಳನ್ನು ಭರ್ತಿ ಮಾಡಲು ತರಬೇತಿಗಳನ್ನು ಆಯೋಜಿಸುವುದು. | | ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು. |
| 3. | "ಜನರ ಯೋಜನೆ ಜನರ ಅಭಿವೃದ್ಧಿ" ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಅಧಿಕಾರಿ | – | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ. ಪಂ. |
| 4. | "ಜನರ ಯೋಜನೆ ಜನರ ಅಭಿವೃದ್ಧಿ" ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿ | – | ಮುಖ್ಯ ಯೋಜನಾಧಿಕಾರಿ, ಜಿ. ಪಂ. |
| 5. | "ಜನರ ಯೋಜನೆ ಜನರ ಅಭಿವೃದ್ಧಿ" ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಅಧಿಕಾರಿ | – | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ. ಪಂ. ಇವರು ನಿಯೋಜಿಸಿದ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು |

| | | | |
|---|---|---|---|
| | | | (ಉಪಕಾರ್ಯದರ್ಶಿ, ಮುಖ್ಯ ಲೆಕ್ಕಾಧಿಕಾರಿ, ಯೋಜನಾ ನಿರ್ದೇಶಕರು, ಇತರೆ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು, ಮುಂತಾದವರು) |
| 6. | "ಜನರ ಯೋಜನೆ ಜನರ ಅಭಿವೃದ್ಧಿ" ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿ | – | ಕಾರ್ಯನಿರ್ವಾಹಕ ಅಧಿಕಾರಿ, ತಾ. ಪಂ. |
| 7. | "ಜನರ ಯೋಜನೆ ಜನರ ಅಭಿವೃದ್ಧಿ" ಗ್ರಾಮ ಪಂಚಾಯತ್ ಮಟ್ಟದ ಮೇಲ್ವಿಚಾರಣಾ ಅಧಿಕಾರಿ | | ಕಾರ್ಯನಿರ್ವಾಹಕ ಅಧಿಕಾರಿಗಳು, ತಾ. ಪಂ. ಇವರು ನಿಯೋಜಿಸಿದ ತಾಲ್ಲೂಕು ಮಟ್ಟದ ಅಧಿಕಾರಿಗಳು. |
| 8. | "ಜನರ ಯೋಜನೆ ಜನರ ಅಭಿವೃದ್ಧಿ" ಗ್ರಾ. ಪಂ. ಮಟ್ಟದ ನೋಡಲ್ ಅಧಿಕಾರಿ | – | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು |
| 9. | "ಜನರ ಯೋಜನೆ ಜನರ ಅಭಿವೃದ್ಧಿ"ಯ ಗ್ರಾಮ ಪಂಚಾಯತಿ ಹಂತದ ಅನುವುಗಾರರು (Facilitators) | – | ಕಾರ್ಯನಿರ್ವಾಹಕ ಅಧಿಕಾರಿಗಳು ನೇಮಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ದ್ವಿತೀಯ ದರ್ಜೆ ಸಹಾಯಕರು ಮತ್ತು ಬಿಲ್ ಕಲೆಕ್ಟರ್ ಸೇರಿದಂತೆ ಗ್ರಾಮ ಪಂಚಾಯಿತಿ ಹಂತದ ಸಂಜೀವಿನಿ ಸಿಬ್ಬಂದಿ, ಗ್ರಾಮ ರೋಜ್‌ಗಾರ್ ಸಹಾಯಕರು, ಗ್ರಾಮ ತಾಂತ್ರಿಕ ಸಹಾಯಕರು (Barefoot Technicians) |

ಮೇಲ್ಕಂಡಂತೆ ನೇಮಿಸಲಾದ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಮಟ್ಟದ ಅಧಿಕಾರಿ/ ಸಿಬ್ಬಂದಿಗಳಿಗೆ "ಜನರ ಯೋಜನೆ ಜನರ ಅಭಿವೃದ್ಧಿ"ಯ ಅನುಷ್ಠಾನದ ಜವಾಬ್ದಾರಿ ನಿರ್ವಹಣೆಯ ಬಗ್ಗೆ ಈ ಕೆಳಗಿನಂತೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತಿಳಿಸಲಾಗಿದೆ.

| ಕ್ರಸಂ | ತರಬೇತಿ ವಿವರ | ದಿನಾಂಕ | ಭಾಗವಹಿಸಬೇಕಾದವರು |
|---|---|---|---|
| 1. | "ಜನರ ಯೋಜನೆ ಜನರ ಅಭಿವೃದ್ಧಿ" ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಮೇಲ್ವಿಚಾರಣೆ ಮತ್ತು ನೋಡಲ್ ಅಧಿಕಾರಿಗಳೊಡನೆ ವಿಡಿಯೋ ಕಾನ್ಫರೆನ್ಸ್ | 28-08-2019 ಆಯೋಜನೆ: ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಹಾಗೂ ರಾಜ್ಯ ನೋಡಲ್ ಅಧಿಕಾರಿ ಮತ್ತು ಎಸ್‌ಐಆರ್‌ಡಿ, ಮೈಸೂರು | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತಿ ನೇಮಿಸುವ ತಾಲ್ಲೂಕು ನೋಡಲ್ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿ, ಡಿಪಿಎಂಯು ಮತ್ತು ಎನ್‌ಐಸಿ ಡಿಇಒ |
| 2. | ಮಿಷನ್ ಅಂತ್ಯೋದಯ ರಾಜ್ಯ ಸಂಪನ್ಮೂಲ ವ್ಯಕ್ತಿಗಳ ತರಬೇತಿ | ದಿನಾಂಕ:06-09-2019 ಮತ್ತು 07-09-2019 ಆಯೋಜನೆ:ಎನ್.ಐ.ಆರ್.ಡಿ., ಹೈದರಾಬಾದ್. | ಎಸ್.ಐ.ಆರ್.ಡಿ., ಬೋಧಕರು, ಎನ್.ಆರ್.ಇ.ಜಿ.ಎ., ರಾಜ್ಯ ಮಟ್ಟದ ಸಮಾಲೋಚಕರು ಮತ್ತು ಎನ್.ಆರ್.ಎಲ್.ಎಮ್ ಸಮಾಲೋಚಕರು |
| 3. | ಮಿಷನ್ ಅಂತ್ಯೋದಯ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳ ತರಬೇತಿ | ದಿನಾಂಕ:09-09-2019 ಆಯೋಜನೆ:ಎಸ್.ಐ.ಆರ್.ಡಿ., ಮೈಸೂರು. | ಎನ್.ಆರ್.ಇ.ಜಿ.ಎ., ಸಿಬ್ಬಂದಿಗಳು ಮತ್ತು ಎನ್.ಆರ್.ಎಲ್.ಎಮ್ ಸಿಬ್ಬಂದಿಗಳು, ಜಿಲ್ಲಾ ಪಂಚಾಯಿತಿ ಡಿ.ಪಿ.ಎಂ.ಯು., ಸಹಾಯಕ ನಿರ್ದೇಶಕರುಗಳು |

| | | | |
|---|---|---|---|
| 4. | ಮಿಷನ್ ಅಂತ್ಯೋದಯ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಸಂಪನ್ಮೂಲ ವ್ಯಕ್ತಿಗಳ ತರಬೇತಿ | ದಿನಾಂಕ:16-09-2019 ಆಯೋಜನೆ:ಎಸ್.ಐ.ಆರ್.ಡಿ., ಮೈಸೂರು. | ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯಿತಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಪಂಚಾಯಿತಿ ಕಾರ್ಯದರ್ಶಿಗಳು, ಎನ್.ಆರ್.ಎಲ್.ಎಮ್ ಸಿಬ್ಬಂದಿಗಳು |
| 5. | "ಜನರ ಯೋಜನೆ ಜನರ ಅಭಿವೃದ್ಧಿ" ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ತರಬೇತಿ | 09-09-2019, ಆಯೋಜನೆ:ಎಸ್ಐಆರ್‌ಡಿ, ಮೈಸೂರು. ಸ್ಥಳ:ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ | ಮುಖ್ಯ ಯೋಜನಾಧಿಕಾರಿ ಮತ್ತು ಡಿಪಿಎಂಆಯು |
| 6. | "ಜನರ ಯೋಜನೆ ಜನರ ಅಭಿವೃದ್ಧಿ" ತಾಲ್ಲೂಕು ಮಟ್ಟದ ಮೇಲ್ವಿಚಾರಣೆ ಮತ್ತು ನೋಡಲ್ ಅಧಿಕಾರಿಗಳಿಗೆ ತರಬೇತಿ | 18-09-2019 ಆಯೋಜನೆ:ಎಸ್ಐಆರ್‌ಡಿ, ಮೈಸೂರು. ಜಿಲ್ಲಾಮಟ್ಟದಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ | ತಾಲ್ಲೂಕು ಮೇಲ್ವಿಚಾರಣೆ ಮತ್ತು ನೋಡಲ್ ಅಧಿಕಾರಿಗಳು |
| 7. | "ಜನರ ಯೋಜನೆ ಜನರ ಅಭಿವೃದ್ಧಿ" ಗ್ರಾಮ ಪಂಚಾಯತ್ ಮಟ್ಟದ ಮೇಲ್ವಿಚಾರಣೆ ಮತ್ತು ನೋಡಲ್ ಅಧಿಕಾರಿಗಳಿಗೆ ತರಬೇತಿ | 21-09-2019 ಆಯೋಜನೆ:ಎಸ್ಐಆರ್‌ಡಿ, ಮೈಸೂರು ತಾಲ್ಲೂಕು ಮಟ್ಟದಲ್ಲಿ ಉಪಗ್ರಹ ಆಧಾರಿತ ತರಬೇತಿ | ಗ್ರಾಮ ಪಂಚಾಯತಿ ಹಂತದ ಮೇಲ್ವಿಚಾರಣೆ ಮತ್ತು ನೋಡಲ್ ಅಧಿಕಾರಿಗಳು |
| 8. | "ಜನರ ಯೋಜನೆ ಜನರ ಅಭಿವೃದ್ಧಿ" ಗ್ರಾಮ ಪಂಚಾಯತ್ ಮಟ್ಟದ ಅನುವುಗಾರರಿಗೆ ತರಬೇತಿ | 23-09-2019 ರಿಂದ 27-09-2019, ಆಯೋಜನೆ:ಎಸ್ಐಆರ್‌ಡಿ, ಮೈಸೂರು. ತಾಲ್ಲೂಕು ಮಟ್ಟದಲ್ಲಿ ಉಪಗ್ರಹ ಆಧಾರಿತ ತರಬೇತಿ | ಪ್ರತಿ ಗ್ರಾ. ಪಂ.ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸೇರಿದಂತೆ ಕಾರ್ಯದರ್ಶಿ, ದ್ವಿತೀಯ ದರ್ಜೆ ಸಹಾಯಕರು ಮತ್ತು ಬಿಲ್ ಕಲೆಕ್ಟರ್ ಸೇರಿದಂತೆ ಗ್ರಾಮ ಪಂಚಾಯಿತಿ ಹಂತದ ಸಂಜೀವಿನಿ ಸಿಬ್ಬಂದಿ, ಗ್ರಾಮ ರೋಜ್‌ಗಾರ್ ಸಹಾಯಕರು, ಗ್ರಾಮ ತಾಂತ್ರಿಕ ಸಹಾಯಕರು (Barefoot Technicians) |
| 9. | "ಜನರ ಯೋಜನೆ ಜನರ ಅಭಿವೃದ್ಧಿ" ಕುರಿತ ತರಬೇತಿ | ದಿನಾಂಕ:30-09-2019 ಆಯೋಜನೆ: ಉಪಗ್ರಹ ಆಧಾರಿತ ಕಾರ್ಯಕ್ರಮ ಎಸ್ಐಆರ್‌ಡಿ, ಮೈಸೂರು | ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಗಳು |
| 10. | "ಜನರ ಯೋಜನೆ ಜನರ ಅಭಿವೃದ್ಧಿ" ಕುರಿತ ತರಬೇತಿ | ದಿನಾಂಕ:01-10-2019 ರಿಂದ 15-10-2019ರ ವರೆಗೆ ಆಯೋಜನೆ:ಉಪಗ್ರಹ ಆಧಾರಿತ ಕಾರ್ಯಕ್ರಮ ಎಸ್ಐಆರ್‌ಡಿ, ಮೈಸೂರು | ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯರುಗಳು |

"ಜನರ ಯೋಜನೆ ಜನರ ಅಭಿವೃದ್ಧಿ"ಯ ಚಟುವಟಿಕೆಗಳು

- "ಜನರ ಯೋಜನೆ ಜನರ ಅಭಿವೃದ್ಧಿ" ಅಂಗವಾಗಿ ಗ್ರಾಮ ಪಂಚಾಯಿತಿಗಳಿಗೆ ಸೂಕ್ತ ಮಾಹಿತಿಗಳನ್ನು ನೀಡುವ ಸಂಬಂಧ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ದಿನಾಂಕ: 30-09-2019 ರೊಳಗೆ ಗ್ರಾಮ ಪಂಚಾಯಿತಿ ಪ್ರಗತಿ ಪರಿಶೀಲನಾ ಸಭೆಯನ್ನು ಕಡ್ಡಾಯವಾಗಿ ಆಯೋಜಿಸತಕ್ಕದ್ದು, ಈ ಸಭೆಯಲ್ಲಿ ಮಿಷನ್ ಅಂತ್ಯೋದಯ ನಮೂನೆಗಳು ಮತ್ತು "ಜನರ ಯೋಜನೆ ಜನರ ಅಭಿವೃದ್ಧಿ" ಮಾಹಿತಿಗಳನ್ನು ನೀಡಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಕ್ರಮವಹಿಸುವುದು. ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಪ್ರಗತಿ ಪರಿಶೀಲನಾ ದಿನಾಂಕಗಳನ್ನು ನಿಗಧಿಪಡಿಸಲು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯು ಸೂಕ್ತ ಕ್ರಮವಹಿಸುವುದು.
- ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಮಿಷನ್ ಅಂತ್ಯೋದಯ ನಮೂನೆಗಳನ್ನು ಪರಿಷ್ಕರಿಸಿದ್ದು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ಗ್ರಾಮವಾರು ಮಾಹಿತಿಯನ್ನು ಪರಿಷ್ಕೃತ ನಮೂನೆಯಲ್ಲಿ ಸಂಗ್ರಹ ಮಾಡುವುದು. ಪ್ರತಿ ಗ್ರಾಮಕ್ಕೆ ಮಾಹಿತಿ ಸಂಗ್ರಹಣೆ ಮಾಡಲು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಉಲ್ಲೇಖ (3)ರ ಪತ್ರದನ್ವಯ 2 ಮಾನವ ದಿನಗಳನ್ನು ನಿಗಧಿಪಡಿಸಿದ್ದು, ನಮೂನೆಗಳನ್ನು ಭರ್ತಿ ಮಾಡುವ ಸಂಬಂಧ ಪ್ರತಿ ಗ್ರಾಮಕ್ಕೆ ಪ್ರತಿ ಮಾನವ ದಿನಕ್ಕೆ ರೂ.363/-ಗಳನ್ನು ಖರ್ಚು ಮಾಡಬಹುದಾಗಿರುತ್ತದೆ. ಇದಕ್ಕೆ ತಗಲುವ ವೆಚ್ಚವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಆಡಳಿತಾತ್ಮಕ ವೆಚ್ಚದಿಂದ ಅಥವಾ 14ನೇ ಹಣಕಾಸು ಆಯೋಗದ ಆಡಳಿತಾತ್ಮಕ ವೆಚ್ಚದಿಂದ ಭರಿಸಲು ಆದೇಶಿಸಿದೆ.
- "ಜನರ ಯೋಜನೆ ಜನರ ಅಭಿವೃದ್ಧಿ"ಗೆ ಸಂಬಂಧಿಸಿದಂತೆ ಮಿಷನ್ ಅಂತ್ಯೋದಯ ನಮೂನೆಗಳಲ್ಲಿ ಸಂಗ್ರಹಿಸಿರುವ ಮಾಹಿತಿಯನ್ನು ಇತರೆ ಇಲಾಖೆಗಳು ಹಾಗೂ ಚುನಾಯಿತ ಸದಸ್ಯರುಗಳೊಂದಿಗೆ ಚರ್ಚಿಸುವುದು. ಈಗಾಗಲೇ ಮಿಷನ್ ಅಂತ್ಯೋದಯ ಮೊಬೈಲ್ ಆ್ಯಪ್‌ನಲ್ಲಿ ಅಕ್ಟೋಬರ್ 02 ರಿಂದ ಅಕ್ಟೋಬರ್ 15ರೊಳಗೆ ಅಳವಡಿಸಲು ಕ್ರಮವಹಿಸುವುದು.
- ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ವಾರ್ಡ್ ಸಭೆಗಳನ್ನು ಅಕ್ಟೋಬರ್ 02 ರಿಂದ ಅಕ್ಟೋಬರ್ 15ರೊಳಗೆ ಆಯೋಜಿಸಿ ಮಿಷನ್ ಅಂತ್ಯೋದಯ ನಮೂನೆಗಳು ಹಾಗೂ ಜನಯೋಜನೆ ಅಭಿಯಾನದ ಮಾಹಿತಿ ನೀಡಲು ಕ್ರಮವಹಿಸುವುದು.
- ಗ್ರಾಮ ಪಂಚಾಯತಿಯ "ಜನರ ಯೋಜನೆ ಜನರ ಅಭಿವೃದ್ಧಿ"ಯ ಪ್ರಮುಖಾಂಶಗಳನ್ನು ಸರ್ಕಾರವು ನಿರ್ದಿಷ್ಟಪಡಿಸಿರುವ ಮಾದರಿಯಲ್ಲಿ ಸಾರ್ವಜನಿಕ ಮಾಹಿತಿ ಫಲಕ (ಗೋಡೆ ಬರಹ)ನ್ನು ಅಳವಡಿಸಿ, ಅದನ್ನು ಜಿಯೋ ಟ್ಯಾಗ್ ಮಾಡಿದ ಛಾಯಾಚಿತ್ರಗಳನ್ನು www.gpdp.nic.in ಅದರಲ್ಲಿ ದಿನಾಂಕ:30-08-2019ರೊಳಗೆ ಅಳವಡಿಸುವುದು.(ಪ್ರತಿಯನ್ನು ಲಗತ್ತಿಸಿದೆ)
- "ಜನರ ಯೋಜನೆ ಜನರ ಅಭಿವೃದ್ಧಿ" ಅಂಗವಾಗಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು 2020-21ನೇ ಸಾಲಿನ 'ನಮ್ಮ ಗ್ರಾಮ ನಮ್ಮ ಯೋಜನೆ' ತಯಾರಿಕಾ ಪ್ರಕ್ರಿಯೆಯನ್ನು 15ನೇ ಅಕ್ಟೋಬರ್ ರಿಂದ 15ನೇ ನವಂಬರ್ ವರೆಗೆ ಪ್ರತಿ ಕಂದಾಯ ಗ್ರಾಮವಾರು ಗ್ರಾಮಸಭೆಯನ್ನು ಆಯೋಜಿಸುವುದು. ಗ್ರಾಮ ಸಭೆಯ ದಿನಾಂಕಗಳನ್ನು ನಿಗಧಿಪಡಿಸುವ ಸಂಬಂಧ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರು ಅಗತ್ಯ ಕ್ರಮವಹಿಸಿ ಜಿ.ಪಿ.ಡಿ.ಪಿ/ ಪ್ಲಾನ್‌ಪ್ಲಸ್ ತಂತ್ರಾಂಶದಲ್ಲಿ ಅಳವಡಿಸಲು ಕ್ರಮವಹಿಸುವುದು. ಇದರಲ್ಲಿ ಮಿಷನ್ ಅಂತ್ಯೋದಯ ನಮೂನೆಗಳ ಮಾಹಿತಿಯ ಬಗ್ಗೆ ಚರ್ಚೆ, 'ನಮ್ಮ ಗ್ರಾಮ ನಮ್ಮ ಯೋಜನೆ'ಯ

ವಾಸ್ತವ ಸ್ಥಿತಿಯ ವಿಶ್ಲೇಷಣೆ, ಎಲ್ಲಾ ಇಲಾಖೆಗಳ ಕಾರ್ಯಕ್ರಮಗಳ ಹಿಂದಿನ ಸಾಲಿನ ಪ್ರಗತಿಯ ವಿವರ ಮತ್ತು 2020-21ನೇ ಸಾಲಿನ ಎಲ್ಲಾ ಕಾರ್ಯಕ್ರಮಗಳು ಹಾಗೂ ಫಲಾನುಭವಿಗಳನ್ನೊಳಗೊಂಡ ಕರಡು ಯೋಜನೆ ಸಿದ್ಧಪಡಿಸುವುದು.

- "ಜನರ ಯೋಜನೆ ಜನರ ಅಭಿವೃದ್ಧಿ" ಅಂಗವಾಗಿ ತಯಾರಿಸಲಾಗುವ "ನಮ್ಮ ಗ್ರಾಮ ನಮ್ಮ ಯೋಜನೆ"ಯಿಂದ 2020-21ನೇ ಸಾಲಿಗೆ ಗ್ರಾಮ ಪಂಚಾಯತಿಯಲ್ಲಿ ಲಭ್ಯವಿರುವ ಸಂಪನ್ಮೂಲ ಗುಚ್ಛಕ್ಕೆ (ಹಿಂದಿನ ಸಾಲಿನಲ್ಲಿ ಗ್ರಾಮ ಪಂಚಾಯಿತಿಗೆ ಎಲ್ಲಾ ಯೋಜನೆಗಳಡಿ ಲಭ್ಯವಿದ್ದ ಅನುದಾನದ ಆಧಾರದ ಮೇಲೆ) ಒಂದು ಸಮಗ್ರ ಕರಡು ಯೋಜನೆಯನ್ನು ಸಿದ್ಧಪಡಿಸುವುದು. ಯಾವುದೇ ಕಾರಣಕ್ಕೂ ಒಂದಕ್ಕಿಂತ ಹೆಚ್ಚಿನ ಯೋಜನೆಗಳನ್ನು ಸಿದ್ಧಪಡಿಸದೇ ಇರಲು ಕ್ರಮವಹಿಸುವುದು.

- ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಭಿವೃದ್ಧಿ ಇಲಾಖೆಗಳ ಅಂದರೆ, ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ರೇಷ್ಮೆ ಇಲಾಖೆ, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಮಾಜ ಕಲ್ಯಾಣ ಮುಂತಾದ ಎಲ್ಲಾ ಇಲಾಖೆಗಳ ಗ್ರಾಮ ಪಂಚಾಯತ್ ಮಟ್ಟದ ಅಧಿಕಾರಿಗಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಯೋಜನೆಗಳು ಹಾಗೂ ಲಭ್ಯವಿರುವ ಅನುದಾನದ ವಿವರಗಳನ್ನು ಗ್ರಾಮ ಪಂಚಾಯತಿ ಸಭೆಯಲ್ಲಿ ವಿವರಿಸುವುದು. ತನ್ಮೂಲಕ "ನಮ್ಮ ಗ್ರಾಮ ನಮ್ಮ ಯೋಜನೆ"ಯಲ್ಲಿ ಎಲ್ಲಾ ಇಲಾಖೆಗಳ ಕಾರ್ಯಕ್ರಮಗಳು ಒಳಗೊಳ್ಳುವಂತೆ ಕ್ರಮವಹಿಸುವುದು.

- "ಜನರ ಯೋಜನೆ ಜನರ ಅಭಿವೃದ್ಧಿ" ಅಂಗವಾಗಿ ತಯಾರಿಸಲಾಗಿರುವ "ನಮ್ಮ ಗ್ರಾಮ ನಮ್ಮ ಯೋಜನೆ"ಯಿಂದ 2020-21ನೇ ಸಾಲಿಗೆ ಗ್ರಾಮ ಪಂಚಾಯತಿಯಲ್ಲಿ ಲಭ್ಯವಿರುವ ಸಂಪನ್ಮೂಲ ಗುಚ್ಛಕ್ಕೆ ಅನುಸಾರ ಕರಡು ಯೋಜನೆಯನ್ನು ಸಿದ್ಧಪಡಿಸುವುದು.

- ಗ್ರಾಮ ಪಂಚಾಯತಿ ಯೋಜನಾ ಸಹಾಯಕ ಸಮಿತಿ ಸಭೆಯನ್ನು ನಡೆಸಿ ಗ್ರಾಮಸಭೆಗಳ ಕರಡು ಯೋಜನೆಗಳನ್ನು ಪರಿಶೀಲಿಸುವುದು. **'ನಮ್ಮ ಗ್ರಾಮ ನಮ್ಮ ಯೋಜನೆ'ಯ ಉಲ್ಲೇಖಿತ ಸುತ್ತೋಲೆ (4) ರನ್ವಯ** ದಿನಾಂಕ 30ನೇ ನವೆಂಬರ್ 2019ರೊಳಗೆ ಕ್ರಮವಹಿಸುವುದು.

- 2020-21ನೇ ಸಾಲಿನ 'ನಮ್ಮ ಗ್ರಾಮ ನಮ್ಮ ಯೋಜನೆ'ಯನ್ನು ಅಂತಿಮಗೊಳಿಸಿ ಗ್ರಾಮ ಪಂಚಾಯತಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದ ನಂತರ ಭಾರತ ಸರ್ಕಾರದ **ಪ್ಲಾನ್‌ಪ್ಲಸ್ ತಂತ್ರಾಂಶದಲ್ಲಿ** ದಿನಾಂಕ 15ನೇ ಡಿಸೆಂಬರ್ 2019ರೊಳಗೆ ಅಳವಡಿಸುವುದು.

- ಈ ಅಭಿಯಾನದಲ್ಲಿ ಗ್ರಾ.ಪಂ/ತಾ.ಪಂ/ಜಿ.ಪಂ ಚುನಾಯಿತ ಪ್ರತಿನಿಧಿಗಳು, ಶಾಸಕರುಗಳು, ಸಂಸತ್ ಸದಸ್ಯರುಗಳು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಸಮುದಾಯ ಪಾಲ್ಗೊಳ್ಳುವಂತೆ ಕ್ರಮ ಕೈಗೊಳ್ಳುವುದು.

- "ಜನರ ಯೋಜನೆ ಜನರ ಅಭಿವೃದ್ಧಿ"ಯಲ್ಲಿ ಭಾಗವಹಿಸುವ ವಿವಿಧ ಹಂತದ ಅಧಿಕಾರಿಗಳ ಮಾಹಿತಿಯನ್ನು ಭಾರತ ಸರ್ಕಾರದ <u>www.gpdp.nic.in</u> ತಂತ್ರಾಂಶದಲ್ಲಿ ಅಳವಡಿಸಲು ಸೂಕ್ತ ಕ್ರಮಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇ-ಆಡಳಿತ ಶಾಖೆಯು ನಿರ್ವಹಿಸುವುದು.

- "ಜನರ ಯೋಜನೆ ಜನರ ಅಭಿವೃದ್ಧಿ" ಆಯೋಜಿಸಲಾಗುವ ತರಬೇತಿ ಕಾರ್ಯಕ್ರಮಗಳಿಗೆ 3 ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಾಗಲು ಆದೇಶಿಸಿದೆ. ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗದ ಅಧಿಕಾರಿಗಳು ಮತ್ತು

ಸಿಬ್ಬಂದಿಗಳ ವಿವರಗಳನ್ನು ಜಿಲ್ಲಾ/ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಗಳು ಸಿದ್ಧಪಡಿಸಿ ಸರ್ಕಾರಕ್ಕೆ ಅಗತ್ಯ ಕ್ರಮಕ್ಕೆ ಸಲ್ಲಿಸಲು ಸೂಚಿಸಿದೆ.

- "ಜನರ ಯೋಜನೆ ಜನರ ಅಭಿವೃದ್ಧಿ"ಯಲ್ಲಿ ಕೈಗೆತ್ತಿಕೊಳ್ಳಲಾಗುವ ತರಬೇತಿ ಕಾರ್ಯಕ್ರಮಗಳಿಗೆ ತಗಲುವ ವೆಚ್ಚವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ರಾಷ್ಟ್ರೀಯ ಗ್ರಾಮ ಸ್ವರಾಜ್ ಯೋಜನೆ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಿಂದ ಭರಿಸಲು ಆದೇಶಿಸಿದೆ.

ಮೇಲೆ ವಿವರಿಸಲಾದ ಮಾರ್ಗಸೂಚಿಯಂತೆ "ಜನರ ಯೋಜನೆ ಜನರ ಅಭಿವೃದ್ಧಿ"ಯನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಎಲ್ಲಾ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ಮೇಲ್ವಿಚಾರಣೆ ಮತ್ತು ನೋಡಲ್ ಅಧಿಕಾರಿಗಳು ಎಲ್ಲಾ ಅವಶ್ಯ ಕ್ರಮಗಳನ್ನು ಕೈಗೊಳ್ಳಲು ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡಲಾಗಿದೆ.

27/8/19.

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
4. ಪ್ರಾದೇಶಿಕ ಆಯುಕ್ತರು. ಬೆಂಗಳೂರು, ಬೆಳಗಾವಿ, ಮೈಸೂರು ಮತ್ತು ಕಲಬುರಗಿ
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು(ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)
8. ರಾಜ್ಯದ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು(ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).